International Journal of Kannada Research
www.kannadajournal.com

ISSN: 2454–5813
IJSR 2015; 1(2): 30-33
© 2015 IJKS
www.kannadajournal.com
Received: 10-07-2015
Accepted: 11-08-2015

**Dr. Nagendra Masuti**
Smt.Veeramma Gangasiri Degree
College for Women,
Kalaburagi - 02

**Correspondence**
**Dr. Nagendra Masuti**
Smt.Veeramma Gangasiri Degree
College for Women,
Kalaburagi – 02

# ಅನುಭಾವದ ಬಲ . . .

**Nagendra Masuti**

ಶರಣ ಸಾಹಿತ್ಯದ ಕೇಂದ್ರ ಬಸವಣ್ಣ. ವಚನ ಸಾಹಿತ್ಯ ರೂಪ ಸುವರ್ಣ ಶೃಂಗವನ್ನು ಮುಟ್ಟಿ, ಮನೆ – ಮನೆಗೂ, ಮನ – ಮನಗಳಿಗೂ ಮುಟ್ಟಿತು. ಸಾರ್ವಕಾಲಿಕವಾದ, ಸಾರ್ವತ್ರಿಕವಾದ ಮೌಲ್ಯಯುತ ಸಾಹಿತ್ಯ ಸೃಷ್ಟಿಕಾರ್ಯ ನಡೆದಿರುವುದು ಶ್ಲಾಘನೀಯ. ಎಲ್ಲ ಜನಸಮುದಾಯದ ಶರಣರು ಸಾಮಾಜಿಕ, ಧಾರ್ಮಿಕ ವಿಷಯಗಳಿಗೆ ವ್ಯಾಖ್ಯಾನ ಬರೆದಿರುವುದು ವಚನಗಳಲ್ಲಿ. ಶ್ರೀಸಾಮಾನ್ಯನ ವಿಚಾರಗಳಿಗೆ, ಅನುಭವಗಳಿಗೆ ತೊಡುಗೆಯಾದ ಸಾಹಿತ್ಯ ಪ್ರಕಾರವೆಂದರೆ ವಚನ ಸಾಹಿತ್ಯ. ಶರಣರ ನಡೆ – ನುಡಿ ಒಂದಾದ, ಬದುಕಿನ ಅನನ್ಯತೆಯನ್ನು ಚಿತ್ರಿಸುವ ಮತ್ತು ಸಾರುವ ಕ್ಷಣಗಳನ್ನು ಇಲ್ಲಿ ಕಾಣಬಹುದು. ಇಂದ್ರಿಯಯುದ ಅನುಭವಗಳಿಗೆ ಆಧ್ಯಾತ್ಮದ, ಅನುಭಾವದ ಆಲೇಪನ ಮಾಡಿ ದೈವವನ್ನು, ದೇವರನ್ನು, ನಂಬಿಕೆಗಳನ್ನು ಸಾಕಾರಗೊಳಿಸಿಕೊಂಡವರ ಬದುಕು ಬೆಲೆಬಾಳುವಂತಹದ್ದು. ಮಾತುಗಳು ಮಾತಾಗಿ ಉಳಿಯುವುದು ಸಾಮಾನ್ಯವಾದರೆ, ಮಾತು ಮುತ್ತಾಗುವುದು ಮಧ್ಯಮ ಸ್ತರದ್ದು, ಆದರೆ ಮಾತು ಮಂತ್ರಗಳಾಗಿರುವುದು ಶರಣರಲ್ಲಿ.
ಹನ್ನೆರಡನೆಯ ಶತಮಾನದ ಶರಣರಲ್ಲಿ ಭಾವವು ವಿಷಯವಾಗಿ, ವಿಷಯವು ವಿಚಾರವಾಗಿ, ವಿಚಾರವು ತತ್ತ್ವವಾಗಿ, ತತ್ತ್ವವು ಸಿದ್ಧಾಂತವಾಗಿ ಪರಿಣಮಿಸುವುದನ್ನು ನೋಡಬಹುದು. ಶರಣರ ವಚನಗಳು ಹಲವು ಪಾದಗಳಿಂದ ಕೂಡಿದ್ದರೂ, ಮೊದಲ ಬಹುಪಾಲು ಸಾಲುಗಳು ವಿಷಯದ ಪೂರಕ ಸಾಮಗ್ರಿಯನ್ನು ಕಟ್ಟಿಕೊಡುವ ಕಾರ್ಯ ಮಾಡುತ್ತವೆ. ಕೊನೆಯ ಸಾಲುಗಳಲ್ಲಿ ಅನುಭಾವ ಗಟ್ಟಿಗೊಂಡು ಸಿದ್ಧಾಂತದ ಎತ್ತರಕ್ಕೆ ಮುಟ್ಟುತ್ತದೆ. ಹೀಗೆ ಅನುಭವ ಇಂದ್ರಿಯಗಮ್ಯತೆಯಿಂದ ಇಂದ್ರಿಯಾತೀತ ಅನುಭಾವಕ್ಕೆ ಮುಟ್ಟಿಸುವ ಶರಣರ ಪ್ರಯತ್ನ ಅನನ್ಯವಾದುದು. ಬಸವಣ್ಣನವರ ಒಂದು ವಚನವನ್ನು ಎತ್ತಿಕೊಂಡು ಹಲವು ಆಯಾಮಗಳಿಂದ ವಿಶ್ಲೇಷಣೆಗೆ ಒಳಗು ಮಾಡುವುದು ಈ ಲೇಖನದ ಉದ್ದೇಶ.

**ಪಠ್ಯ**

ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ
ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯ
ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯ
ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯ
ಕೂಡಲಸಂಗನ ಶರಣರ ಅನುಭಾವದ ಬಲದಿಂದ ಎನ್ನ ಭವದ ಕೇಡನೋಡಯ್ಯ
(ಬಸವಣ್ಣನವರ ವಚನಸಂಪುಟ ಸಂ: ಡಾ.ಎಂ.ಎಂ.ಕಲಬುರ್ಗಿ ಸಂಪುಟ ೦೧,
ಸಮಗ್ರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಪ್ರಕಟಣೆ)

ಈ ವಚನದಲ್ಲಿ ಐದರ ಬಲದಿಂದ ಐದರ ಕೇಡನ್ನು ನೋಡಬಹುದು. ಐದೂ ಸಾಲುಗಳಲ್ಲಿ ಕೊನೆಯ ‘ನೋಡಯ್ಯ’ ಎಂಬ ಸಂಬೋಧನೆವುಂಟು. ಶರಣರಲ್ಲಿ ಭಕ್ತ ಹಾಗೂ ಭವಿಯೆಂಬ ಭೇದಗಳನ್ನು ನೋಡಬಹುದು. ಭವಿತನಕ್ಕೆ ಕಾರಣವಾದ ಮನಸ್ಸು, ಇಂದ್ರಿಯ, ಚಿತ್ತಗಳನ್ನು ಕಳೆಯಲು ಸುಮಾರು ಪ್ರಯತ್ನಗಳನ್ನು ಭಕ್ತನಾದವನು ಮಾಡಬೇಕಾಗುತ್ತದೆ. ಈ ವಚನದ ಮೊದಲ ನಾಲ್ಕು ಸಾಲುಗಳು ನಾಲ್ಕು ಶಕ್ತಿಗಳನ್ನು, ಆ ಶಕ್ತಿಯು ಕಾರ್ಯ ನಿರ್ವಹಿಸುವುದರಿಂದ ನಾಲ್ಕರ ಊನತೆಯ ಅಳಿವನ್ನು ಕಾಣಬಹುದು. ಅವುಗಳನ್ನು ಒಂದೊಂದಾಗಿ ಗಮನಿಸಬಹುದು.

**ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ**

ಅಜ್ಞಾನದ ಕಾರಣಕ್ಕಾಗಿ ಜ್ಞಾನವು ಶೂನ್ಯವಾಗಿರುವುದು. ಅದ್ದರಿಂದ ಜ್ಞಾನದ ಪ್ರಮಾಣ, ಸಾಮರ್ಥ್ಯಗಳು ಹೆಚ್ಚಿದಂತೆಲ್ಲಾ ಅಜ್ಞಾನ ತಾನೇ ತಾನಾಗಿ ಮರೆಯಾಗುತ್ತದೆ. ಅಜ್ಞಾನ ಸೂಚಕವಾದ ಅಹಂಮಮತೆ, ಮನಸ್ಸಂಚಲ, ಇಂದ್ರಿಯೋದ್ರೇಕ, ದೇಹಮೋಹ, ಅತಿಕಾಂಕ್ಷೆ, ತ್ರಿವಿಧಮಲ, ಸಂಸಾರ, ರಾಗದ್ವೇಷ, ಸರ್ವಪ್ರಪಂಚ, ಸರ್ವದುಃಖಗಳೆಲ್ಲ ನಮ್ಮನ್ನು ಅಂಧಕಾರದಲ್ಲಿ ತಳ್ಳುವ ಕಾರ್ಯ ಮಾಡುತ್ತವೆ. ಇವುಗಳಿಂದ ದೂರ ಉಳಿಯುವ ಹಾಗೂ ಇಲ್ಲವಾಗುವ ಪ್ರಯತ್ನ ಹೆಚ್ಚಾದಾಗ ಮಾತ್ರ ಜ್ಞಾನ ವೃದ್ಧಿಯಾಗುತ್ತದೆ. ಇವುಗಳ ಅಳಿವಾಗದೆ ಕೂಡಲಸಂಗಮದೇವನನ್ನು ಒಡಗೂಡಬಾರದೆಂದು ಬಸವಣ್ಣ ಹೇಳುವುದುಂಟು :

> ಅಜ್ಞಾನದಿಂದ ಹುಟ್ಟಿತ್ತು ಅಹಂಮಮತೆ
> ಅಜ್ಞಾನದಿಂದ ಹುಟ್ಟಿತ್ತು ಮನಸ್ಸಂಚಲ
> ಅಜ್ಞಾನದಿಂದ ಹುಟ್ಟಿತ್ತು ಇಂದ್ರಿಯೋದ್ರೇಕ
> ಅಜ್ಞಾನದಿಂದ ಹುಟ್ಟಿತ್ತು ದೇಹಮೋಹ
> ಅಜ್ಞಾನದಿಂದ ಹುಟ್ಟಿತ್ತು ಅತಿಕಾಂಕ್ಷೆ
> ಅಜ್ಞಾನದಿಂದ ಹುಟ್ಟಿತ್ತು ಸಂಸಾರ
> ಅಜ್ಞಾನದಿಂದ ಹುಟ್ಟಿತ್ತು ರಾಗದ್ವೇಶ
> ಅಜ್ಞಾನದಿಂದ ಹುಟ್ಟಿತ್ತು ಸರ್ವಪ್ರಪಂಚ
> ಅಜ್ಞಾನದಿಂದ ಹುಟ್ಟಿತ್ತು ಸರ್ವದುಃಖ
> ಕೂಡಲಸಂಗಮದೇವಾ, ಈ ಅಜ್ಞಾನಭ್ರಮೆಯ
> ಕೆಡಿಸಿದಲ್ಲದೆ ನಿಮ್ಮನೊಡಗೂಡಬಾರದು
> (ಬಸವಣ್ಣನವರ ವಚನಸಂಪುಟ ಸಂ: ಡಾ.ಎಂ.ಎಂ.ಕಲಬುರ್ಗಿ)

ಜ್ಞಾನ – ಅಜ್ಞಾನವೆಂಬುದು ದ್ವಂದ್ವ. ಈ ಉಭಯದ ಪ್ರಜ್ಞೆಯನ್ನು ಅರಿದು ಜ್ಞಾನ, ಸುಜ್ಞಾನ, ಸಾತ್ವಿಕಜ್ಞಾನ, ಅಂತಿಮಜ್ಞಾನ ಅಥವಾ ಚರಮಜ್ಞಾನದ ಹಂತಕ್ಕೆ ಮುಟ್ಟುವುದು ಮುಖ್ಯ. ಜ್ಞಾನದೊಟ್ಟಿಗೆ ಇರುವ ಅಜ್ಞಾನದ ವಿಷಯಂಗಳನ್ನು ತಲೆಕೆಳಗು ಮಾಡಿ, ಜ್ಞಾನದ ಬೀಜಗಳನ್ನು ಬಿತ್ತಿ, ಬೆಳೆದು, ತೆನೆ – ಕಾಳಾಗಿ ಪರಿಣಾಮವನ್ನು ಎದುರು ನೋಡಲು ಹಲವಾರು ಪ್ರಯತ್ನಗಳನ್ನು ಮಾಡಬೇಕಾಗುತ್ತದೆ.

> ಮರ ಮರ ಮಥನದಿಂದ ಅಗ್ನಿ ಹುಟ್ಟಿ
> ಆ ಮರನೆಲ್ಲವ ಸುಡದಿಪ್ಪುದೆ
> ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ
> ಎನ್ನ ತನು ಗುಣವೆಲ್ಲವ ಸುಡದಿಪ್ಪುದೆ
> ಇದು ಕಾರಣ ಮಹಾನುಭಾವರ ತೋರಿಸು
> ಕೂಡಲಸಂಗಮದೇವಾ
> (ಬಸವಣ್ಣನವರ ವಚನಸಂಪುಟ ಸಂ: ಡಾ.ಎಂ.ಎಂ.ಕಲಬುರ್ಗಿ)

ತನುಗುಣಗಳನ್ನು ಕಳೆದುಕೊಳ್ಳದೆ ಜ್ಞಾನ ಉತ್ಪತ್ತಿಯಾಗುವುದಿಲ್ಲ ಹಾಗೂ ಮಹಾನುಭಾವಿಗಳ ಸಂಗದಿಂದ ಅದು ಜಾಗೃತವಾಗುತ್ತದೆಂಬ ಭಾವ ವಚನ ಸಾರುತ್ತದೆ. ಇಂತದ್ದೇ ಅರ್ಥ ಬರುವ ವಚನವೊಂದು ಮಹಾದೇವಿಯಕ್ಕಳಲ್ಲಿ ನೋಡಬಹುದು;

> ಮರ ಮರ ಮಥಿಸಿ ಕಿಚ್ಚು ಹುಟ್ಟಿ
> ಸುತ್ತಣ ತರುಮರಾದಿಗಳ ಸುಡಲಾಯಿತ್ತು
> ಆತ್ಮ – ಆತ್ಮ ಮಥನಿಸಿ ಅನುಭಾವ ಹುಟ್ಟಿ
> ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು
> ಇಂತಪ್ಪ ಅನುಭಾವರ ಅನುಭಾವವ ತೋರಿ ಎನ್ನ
> ಒಡಲನುಳುಹಿಕೊಳ್ಳಾ ಚನ್ನಮಲ್ಲಿಕಾರ್ಜುನಾ
> (ಶಿವಶರಣೆಯರ ವಚನಸಂಪುಟ ಸಂ: ಡಾ.ವೀರಣ್ಣ ರಾಜೂರ)

ಹೊದ್ದಿರುವ ತನುಗುಣಗಳನ್ನು ಕಳೆಯಲು ಆತ್ಮ – ಪರಮಾತ್ಮನ ಸಂಗದಿಂದ ಹುಟ್ಟುವ ಅನುಭಾವಕ್ಕೆ ಮಾತ್ರ ಅಂತಹ ಶಕ್ತಿಯಿರುವುದು. ಅಂತಹ ಅನುಭಾವದ ಜ್ಞಾನಾಗ್ನಿಯಿಂದ ಅಜ್ಞಾನವನ್ನು ಸುಟ್ಟು ದೇವನಿಗೆ ಪ್ರಿಯನಾಗುವ ತತ್ತ್ವ ಇಲ್ಲಿದೆ. ವಿಶ್ವದಲ್ಲಿ ಅನೇಕ ಜ್ಞಾನ ಶಾಖೆಗಳಿವೆ. ಅವೆಲ್ಲ ಏನು ಎಂಬುದನ್ನು ಒಂದೆಡೆ ಬಸವಣ್ಣನವರು ಹೀಗೆ ಹೇಳುವುದುಂಟು;

> ಶ್ವಾನಜ್ಞಾನ, ಗಜಜ್ಞಾನ, ಕುಕ್ಕುಟಜ್ಞಾನವೆಂಬ
> ಜ್ಞಾನತ್ರಯಂಗಳೇನಾದುವು
> ಕೂಡಲಸಂಗಮದೇವಾ
> ನಿಮ್ಮನರಿಯದ ಜ್ಞಾನವೆಲ್ಲಾ ಅಜ್ಞಾನ
> (ಬಸವಣ್ಣನವರ ವಚನಸಂಪುಟ ಸಂ: ಡಾ.ಎಂ.ಎಂ.ಕಲಬುರ್ಗಿ)

ಜ್ಞಾನ ಮತ್ತು ಅಜ್ಞಾನದ ಸ್ಪಷ್ಟ ಚಿತ್ರಣ ಈ ವಚನ ನಮಗೆ ನೀಡುತ್ತದೆ. ಅನೇಕ ರೀತಿಯ ಜ್ಞಾನದ ವಿಸ್ತಾರ ವಿಶ್ವದಲ್ಲಿದ್ದರೂ ಅವೆಲ್ಲ ಭೌತಿಕತೆಯನ್ನು ವಿವರಿಸುತ್ತವೆ. ಅಂತೆಯೇ ನಿಮ್ಮನರಿಯದ ಜ್ಞಾನವು ಜ್ಞಾನವೇ ಅಲ್ಲವೆಂದು ನಿರಾಕರಿಸುವ ಗುಣ ಪ್ರವೃತ್ತಿ ಇಲ್ಲಿದೆ. ಚರಮಸತ್ಯದ, ಅಂತಿಮಜ್ಞಾನದ ಆಯತವೇ ಜ್ಞಾನವೆಂಬುದು ಈ ವಚನದ ನಿಲುವು. ಜ್ಞಾನ ಮತ್ತು ಅಜ್ಞಾನದ ಚಿಂತನೆಯನ್ನು ಬಸವಣ್ಣನವರು ನಲವತ್ತೆಂಟು ವಚನಗಳಲ್ಲಿ ಮಾಡಿರುವುದನ್ನು ನೋಡಬಹುದು. ಅವೆಲ್ಲವೂ ಜ್ಞಾನದ ಮಹತ್ವವನ್ನು ಸಾರುತ್ತವೆ.

**ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯ**

ನಾವು ಕತ್ತಲೆಯನ್ನು ಹೊಡೆದೋಡಿಸಲು ಸುಮಾರು ಪ್ರಯತ್ನಗಳನ್ನು ಮಾಡುತ್ತೇವೆ. ಆದರೆ ಸಣ್ಣ ಮಿಣುಕು ದೀಪವನ್ನು ಹಚ್ಚಲು ಆಗುತ್ತಿಲ್ಲ. ಸಣ್ಣ ದೀಪ ಹಚ್ಚಿದರೆ ಸಾಕು ಅಂಧಕಾರ ಅಳಿದು ಹೋಗುತ್ತದೆ. ಎರಡೂ ಒಂದೆಡೆಗೆ ನಿಲ್ಲಲು ಸಾಧ್ಯವಿಲ್ಲ. ಕತ್ತಲೆ – ಬೆಳಕಿನ ಚಿಂತನೆಯನ್ನು ಹದಿಮೂರು ವಚನಗಳಲ್ಲಿ ಬಸವಣ್ಣನವರು ಮಾಡುತ್ತಾರೆ. ಈ ಎಲ್ಲ ಸಾಲುಗಳು ಪೂರಕ ಪಥ್ಯ. ಈ ಪಥ್ಯವನ್ನು ಹಿಡಿದು ಐದನೆಯ ಚರಣದ ಪ್ರತಿಪಾದಿತ ತತ್ತ್ವವನ್ನು ಅರ್ಥ ಮಾಡಿಕೊಳ್ಳಬೇಕಿದೆ. ಅಂತೆಯೇ ಹೋಲುವ ಇತರ ವಚನಗಳನ್ನು ನೋಡಬಹುದು;

> ಕರಿಘನ ಅಂಕುಶ ಕಿರಿದೆನ್ನಬಹುದೆ ಬಾರದಯ್ಯ
> ಗಿರಿಘನ ವಜ್ರ ಕಿರಿದೆನ್ನಬಹುದೆ ಬಾರದಯ್ಯ
> ತಮಂಧ ಘನ ಜ್ಯೋತಿ ಕಿರಿದೆನ್ನಬಹುದೆ ಬಾರದಯ್ಯ
> ಮರವು ಘನ ನಿಮ್ಮ ನೆನೆವ ಮನ ಕಿರಿದೆನ್ನಬಹುದೆ ಬಾರದಯ್ಯ
> ಕೂಡಲಸಂಗಮದೇವ
> (ಬಸವಣ್ಣನವರ ವಚನಸಂಪುಟ ಸಂ: ಡಾ.ಎಂ.ಎಂ.ಕಲಬುರ್ಗಿ)

ಈ ವಚನದ ಸಾಲುಗಳಲ್ಲಿ ಪ್ರಶ್ನೆಯು ಇದೆ, ಉತ್ತರವೂ ಇದೆ. ತಮಂಧವನ್ನು ಘನವೆಂದು ಹೇಳಬಹುದೆ ಎಂಬ ಪ್ರಶ್ನೆ ಮಾಡಿ, ಇಲ್ಲವಯ್ಯ ಎಂಬ ಉತ್ತರವನ್ನು ನೀಡುತ್ತಾರೆ. ಇದೇ ವಚನಕ್ಕಿರುವ ಸಾಂದ್ರತೆಯ ಗುಣ. ಒಂದೇ ವಚನದಲ್ಲಿ ನಾಲ್ಕು ಪ್ರಶ್ನೆ, ಆ ಪ್ರಶ್ನೆಗೆ ಉತ್ತರ ಹಾಗೂ ತತ್ತ್ವವನ್ನು ಕಟ್ಟಿಕೊಡುವ ಶಕ್ತಿ ವಚನ ಸಾಹಿತ್ಯಕ್ಕಿದೆ. 'ಜ್ಯೋತಿವಿಡಿದು ಕತ್ತಲೆಯನರಸುವೆ, ಇದೇಕೊ ಮರುಳ ಮಾನವಾ' ಹಾಗೂ ತಮಂಧವಂಜುವುದು ಜ್ಯೋತಿಗಯ್ಯ' ಎಂದು ಹೇಳಿ ಬೆಳಕಿನ, ಚಿದ್ಬೆಳಕಿನ, ಜ್ಯೋತಿಯ, ಮಹಾಜ್ಯೋತಿಯ, ಪರಂಜ್ಯೋತಿಯ ಕುರಿತು ಮಾತನಾಡುತ್ತಾರೆ.

**ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯ**

ಸತ್ಯದ ನಿಲುವನ್ನರಿಯುವುದು, ಸತ್ಯ – ಸದಾಚಾರದ ನಡೆಯನ್ನು ಹೊಂದುವುದು ಶರಣನಾದವನಿಗೆ ಬೇಕಿರುವುದು. ಶಿವಮಯವಾದ

ಜಗತ್ತಿನಲ್ಲಿ ಶಿವನಿಗೆ ಸತ್ಯ – ಶುದ್ಧತೆಯು ಉಂಟು. ಸತ್ಯ ಮತ್ತು ಶುದ್ಧತೆಗಳು ಅಳವಟ್ಟರೆ ಗುರು, ಲಿಂಗ, ಜಂಗಮ, ಪ್ರಸಾದ, ಗುಣತ್ವಗಳೆಲ್ಲ ಬೇಕಿಲ್ಲವೆಂಬದು ಬಸವಣ್ಣನವರ ನುಡಿ.

> ಶಿವಶಿವಾ ಮೂರ್ತಿಗೆ ಸತ್ಯ ಶುದ್ಧ ಉಂಟೆಂಬಿರಿ
> ಸತ್ಯ [ಶುದ್ಧ]ವುಳ್ಳವರಿಗೆ ಗುರುವಿಲ್ಲ
> ಸತ್ಯ [ಶುದ್ಧ]ವುಳ್ಳವರಿಗೆ ಲಿಂಗವಿಲ್ಲ
> ಸತ್ಯ [ಶುದ್ಧ]ವುಳ್ಳವರಿಗೆ ಜಂಗಮವಿಲ್ಲ
> ಸತ್ಯ [ಶುದ್ಧ]ವುಳ್ಳವರಿಗೆ ಪ್ರಸಾದವಿಲ್ಲ
> ಸತ್ಯ [ಶುದ್ಧ]ವುಳ್ಳವರಿಗೆ ಗುಣತ್ವವಿಲ್ಲ ಕೇಳಿರೆ . . . .
> (ಬಸವಣ್ಣನವರ ವಚನಸಂಪುಟ ಸಂ: ಡಾ.ಎಂ.ಎಂ.ಕಲಬುರ್ಗಿ)

ಸತ್ಯ ಶುದ್ಧ ದೇವರಿಗೆ ಉಪಚಾರವುಂಟಾದ ಕಾರಣ ಗುರು, ಲಿಂಗ, ಜಂಗಮ, ಪ್ರಸಾದಕ್ಕೆ ಶರಣೆನ್ನಬೇಕೆಂದು ಬಸವಣ್ಣನ ಕರೆ. ಸಾಧಕ ಸಿದ್ಧಿಯೆಡೆಗೆ ಹೊರಟಾಗ ಹಲವಾರು ಅನುಭವ, ಅನುಭಾವಗಳು ಜರುಗಿದರೂ, ಅವುಗಳ ಪೂರ್ಣ ಸಂಭವಿಸುವಿಕೆಗಳ ಪರಿಚಯ ತನಗಾಗದು ಎಂದು ಹೇಳುವುದರ ಮೂಲಕ ಬಸವಣ್ಣ ಕಿಂಕರತ್ವವನ್ನು ಮೆರೆಯುತ್ತಾನೆ.

> ಸತ್ಯ ಸದಾಚಾರ ಸಂಬಂಧವಾದ ಭೃತ್ಯಾಚಾರ ಎನಗಿಲ್ಲವಯ್ಯ
> ಆನು ನಿಮ್ಮ ನೆನೆಯಲು ಎನಗೆ ಭಕ್ತಿಯಿಲ್ಲವಯ್ಯ
> ಕರುಣದಿಂ ಕೃಪೆ ಮಾಡಾ ಕೂಡಲಸಂಗಮದೇವಾ
> (ಬಸವಣ್ಣನವರ ವಚನಸಂಪುಟ ಸಂ: ಡಾ.ಎಂ.ಎಂ.ಕಲಬುರ್ಗಿ)

ಭಕ್ತನಾಗಿ, ಶರಣನಾಗಿ, ಸಿದ್ಧಿಯನ್ನುಗೈದಾಗಲೂ ಇನ್ನೂ ಇನ್ನೂ ದೇವರ ಕೃಪೆ ತನಗಿರಲೆಂದು ಬಯಸುವ ಮನಸ್ಸಿಗೆ ಇನ್ನಷ್ಟು ಬೆಳೆಯುವ ಸಾಂದ್ರತೆಯಿರುವುದು ತಿಳಿಯುತ್ತದೆ. ಅಂತಹ ಮನಸ್ಸು ಬಸವನದಾಗಿದೆ. 'ಸತ್ಯವ ನುಡಿಯುವುದೇ ದೇವಲೋಕ' ಹಾಗೂ 'ಭಕ್ತನಂಗಳವೇ ವಾರಣಾಸಿ, ಕಾಯವೇ ಕೈಲಾಸ, ಇದು ಸತ್ಯ' – ಎಂಬ ವಚನಗಳು ಸತ್ಯದ ಮಹತ್ವವನ್ನು ಸಾರುತ್ತವೆ. ವಚನ ಸಾಹಿತ್ಯದ ಕಳಕಳಿ ಹಾಗೂ ಪ್ರತಿಪಾದಿತ ಮೌಲ್ಯ – ಸತ್ಯ. ಅದರ ಸಂಪಾದನೆಯೇ ಸದ್ಗುಣಗಳ ಸೃಷ್ಟಿಯ ಮೂಲ. ನಾವು ಮಾಡುವ ಯಾವುದೇ ಕಾರ್ಯ ಭೌತಿಕತೆಯನ್ನು ಮೀರಿ ಆಧ್ಯಾತ್ಮದೆಡೆಗೆ ಹೊರಳಬೇಕು.

> ಆನೆಯನೇರಿಕೊಂಡು ಹೋದಿರಿ ನೀವು
> ಕುದುರೆಯನೇರಿಕೊಂಡು ಹೋದಿರಿ ನೀವು
> ಕುಂಕುಮ ಕಸ್ತೂರಿ ಹೂಸಿಕೊಂಡು ಹೋದಿರೇ ನೀವು ಅಣ್ಣಾ !
> ಸತ್ಯದ ನಿಲವನರಿಯದೆ ಹೋದಿರಲ್ಲ
> ಸದ್ಗುಣವೆಂಬ ಫಲವ ಬಿತ್ತದೆ ಹೋದಿರಲ್ಲ
> ಅಹಂಕಾರವೆಂಬ ಸದಮದಗಜವನೇರಿ
> ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ
> ನಮ್ಮ ಕೂಡಲಸಂಗಮದೇವನರಿಯದೆ
> ನರಕಕ್ಕೆ ಭಾಜನವಾದಿರಲ್ಲಾ
> (ಬಸವಣ್ಣನವರ ವಚನಸಂಪುಟ ಸಂ: ಡಾ.ಎಂ.ಎಂ.ಕಲಬುರ್ಗಿ)

ಭೌತಿಕ ಸಂಪತ್ತನ್ನು ಗಳಿಸಿಕೊಂಡು ಅದನ್ನು ಅನುಭವಿಸುತ್ತಾ ಹೋದ ನಿಮಗೆ ಸತ್ಯದ ತಿಳುವಳಿಕೆಯ ನೆಲೆಯ ತಿಳಿಯದೆ ಹೋಯಿತಲ್ಲವೆಂಬ ವಿಷಾದ ಇಲ್ಲಿದೆ. ಸದ್ಗುಣಗಳ ಪಾಲನೆ, ಪೋಷಣೆ ಮಾಡದೆ ಹಲವು ವಿಧಿಗೆ ಗುರಿಯಾಗಿ ಹೋಗುತ್ತಿರುವಿರಲ್ಲವೆಂದು, ನರಕಕ್ಕೆ ಪಾಲುದಾರಿಕೆಗಾಗಿ ನಡೆಯುತ್ತೀರಲ್ಲವೆಂದೂ ಸಹ ಬಸವಣ್ಣ ಹೇಳುತ್ತಾರೆ.

**ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯ**

> ನಿಮ್ಮ ಶ್ರೀಪಾದವ ಮುಟ್ಟಿ ಕರ್ಮ ಹರಿಯಿತ್ತು
> ನಿಮ್ಮ ಪ್ರಸಾದದಿಂದ ಭವಗೆಟ್ಟೆ ನೋಡಯ್ಯ
> ನಿಮ್ಮ ಪ್ರಸಾದದಿಂದ ಮನಪರುಷ
> ನಿಮ್ಮ ಪ್ರಸಾದದಿಂದ ದೃಷ್ಟಿಪರುಷ
> ನಿಮ್ಮ ಪ್ರಸಾದದಿಂದ ಭಾವಪರುಷ
> ನಿಮ್ಮ ಪ್ರಸಾದದಿಂದ ಲಿಂಗಗಣಂಗಳು
> ಕೂಡಲಸಂಗಮದೇವಾ
> ನಿಮ್ಮ ಶರಣರ ಅನುಭಾವದಿಂದ ಸುಖಿಯಾದೆನು
> (ಬಸವಣ್ಣನವರ ವಚನಸಂಪುಟ ಸಂ: ಡಾ.ಎಂ.ಎಂ.ಕಲಬುರ್ಗಿ)

ಕೂಡಲಸಂಗಮದೇವನ ಪಾದಸ್ಪರ್ಶದಿಂದ ಹಿಂದಣ ಕರ್ಮ ಹರಿದು, ಪ್ರಸಾದದಿಂದ ಮನ, ದೃಷ್ಟಿ, ಭಾವ, ಲಿಂಗಗಣಗಳೆಲ್ಲ ಪರುಷವಾಗಿ ಮಾರ್ಪಡುವುದನ್ನು ನೋಡಬಹುದು. ಶರಣರ ಅನುಭಾವದಿಂದ ಎಲ್ಲ ಬಗೆಯ ಸುಖಗಳನ್ನು ಪಡೆದೆನು ಎಂದು ಬಸವಣ್ಣ ಹೇಳುವುದುಂಟು. 'ಆದ್ಯರ ವಚನ ಪರುಷ ಕಂಡಯ್ಯ' ಎಂಬ ಸಾಲು ಹಿಂದಣದ ಅನುಭಾವ ಸಾಹಿತ್ಯದ ಪರಿಚಯ ನಮಗೆ ನೀಡುತ್ತದೆ. ದಾಸಿಮಯ್ಯ ಹೇಳುವ 'ಸೂಳ್ನುಡಿ', ಬಸವಣ್ಣ ಹೇಳುವ ಆದ್ಯರ ವಚನಗಳು ಬದುಕಿಗೆ ದಾರಿದೀಪಗಳಾಗಿವೆ.

**ಕೂಡಲಸಂಗನ ಶರಣರ ಅನುಭಾವದ ಬಲದಿಂದ ಎನ್ನ ಭವದ ಕೇಡನೋಡಯ್ಯ**

> ಆಚಾರವಿಡಿದು ಅನುಭಾವ ಲಿಂಗಸಿದ್ಧಿ
> ಅನುಭಾವ ಲಿಂಗವಿಡಿದು ಮಾರ್ಗ ತ್ರಿಲಿಂಗಸಿದ್ಧಿ
> (ಬಸವಣ್ಣನವರ ವಚನಸಂಪುಟ ಸಂ: ಡಾ.ಎಂ.ಎಂ.ಕಲಬುರ್ಗಿ)

ಶರಣರ ವಚನಗಳೆಲ್ಲ ನಡೆಯ ಸಾಹಿತ್ಯ. ಆ ನಡೆಯಿಂದ ಅನುಭಾವದ ಸಿದ್ಧಿಯಾಗುವುದು. ಅನುಭಾವದಿಂದಲೇ ಸಂಪೂರ್ಣ ಸಿದ್ಧಿಯು ಸಾಧ್ಯ. ಭವಿತನದ ಕೇಡು ಶರಣರ ಅನುಭಾವದ ಬಲದಿಂದ. ಅತೀಂದ್ರೀಯದ ಜ್ಞಾನದ ಪ್ರಭಾವದಿಂದ ಇಹದ, ಪ್ರಾಪಂಚಿಕ, ಮಾಯೆಯ ಮುಸುಕುಗಳೆಲ್ಲ ಮಾಯವಾಗುತ್ತವೆ. ಇಂದ್ರಿಯಗಳಿಂದ ಮತ್ತೊಂದಕ್ಕೆ, ಇನ್ನೊಂದಕ್ಕೆ ಮನಸ್ಸು ಸೋಲುವುದನ್ನು ತಪ್ಪಿಸುವ ಶಕ್ತಿ ಶರಣರ ಅನುಭಾವಕ್ಕಿದೆ. ಆಚಾರವಿಲ್ಲದೆ ಅನುಭಾವ ಪ್ರಪಂಚ ವಿಸ್ತಾರವಾಗುವುದಿಲ್ಲ. ಆ ಅನುಭವದ ಭಂಡಾರವೇ ಸರ್ವಶಕ್ತಿಗೂ, ಸಿದ್ಧಿಗೂ ಕಾರಣವಾಗುತ್ತದೆ. ಸತ್ಯ, ಶುದ್ಧ, ಸಾತ್ವಿಕ ಅನುಭವಗಳೇ ಅನುಭಾವಗಳಾಗಿ ದಿವ್ಯ, ಭವ್ಯ ಬೆಳಕಾಗಿ, ಪ್ರಭೆಯಾಗಿ ಕಂಗೊಳಿಸುತ್ತದೆ. ಆ ಚಿದ್ಬೆಳಕಿನ ಪ್ರಭೆಯಿಂದ ಇಡೀ ತನು, ಮನ, ಕರಣಂಗಳೆಲ್ಲವೂ ಬೆಳಗುತ್ತವೆ. ಈ ಬೆಳಗುವಿಕೆಯೇ ಶರಣರ ಮುಖ್ಯ ಲಕ್ಷಣ. ಅಂತಹ ಶರಣರ ಅನುಭವ ಪ್ರಪಂಚದಿಂದ ಅನುಭಾವದ ಕೀಲಿಕೈಯ ಒಡೆತನ ಸಾಧ್ಯವಾಗುತ್ತದೆ. ಮಹಾದೇವಿಯಕ್ಕ ಒಂದೆಡೆ ಅನುಭಾವದ ಕುರಿತು ;

> ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ
> ಎನ್ನ ತನು ಶುದ್ಧವಾಯಿತ್ತು
> ಎನ್ನ ಮನ ಶುದ್ಧವಾಯಿತ್ತು
> ಎನ್ನ ಪ್ರಾಣ ಶುದ್ಧವಾಯಿತ್ತು
> ಅಯ್ಯಾ ನಿಮ್ಮ ಅನುಭಾವಿಗಳು
> ಎನ್ನ ಒರೆದೊರೆದು ಆಗುಮಾಡಿದ ಕಾರಣ
> ಚೆನ್ನಮಲ್ಲಿಕಾರ್ಜುನಯ್ಯ ನಿಮಗಾನು ತೊಡಿಗೆಯಾದೆನು
> (ಶಿವಶರಣೆಯರ ವಚನಸಂಪುಟ ಸಂ: ಡಾ.ವೀರಣ್ಣ ರಾಜೂರ)

ಅನುಭಾವಿಗಳೊಡನಾಟದಿಂದ ತನು, ಮನ, ಪ್ರಾಣ ಶುದ್ಧವಾದ ಬಗೆ ಹೇಳುತ್ತಾಳೆ ಮಹಾದೇವಿಯಕ್ಕ. ಅನುಭಾವಿಗಳ ಸಂಗದಲ್ಲಿದ್ದು, ಅವರೆಲ್ಲ ನನ್ನನ್ನು ಬಗೆಬಗೆಯಾಗಿ ಪರೀಕ್ಷಿಸಿದ ಕಾರಣವೇ ಅಪ್ಪಟ ಚಿನ್ನವಾಗಲು ಹಾಗೂ ತನ್ನ ಚನ್ನಮಲ್ಲಿಕಾರ್ಜುನನಿಗೆ ಪ್ರಿಯವಾಗಲು ಸಾಧ್ಯವಾಯಿತೆನ್ನುತ್ತಾಳೆ ಮಹಾದೇವಿಯಕ್ಕ. ಶರಣ ತಾನು ಬೆಳೆಯುವಲ್ಲಿ ಶರಣ ಸಮುದಾಯದ ಪಾತ್ರ ಅನನ್ಯವಾದುದು. ವ್ಯಕ್ತಿ ತಾನು ಎಷ್ಟೇ ಗಟ್ಟಿಗನಾದರೂ, ಶರಣ ಸಂಸ್ಕೃತಿ, ಸಮುದಾಯಗಳಿಂದ ವಿಕಾಸವೆಂಬುದು ಬೇಗನೆ ಆಗುತ್ತದೆಂಬುದನ್ನು ಶರಣರು ಮನಗಂಡಿದ್ದರು. ಹಾಗಾಗಿಯೇ ಅನೇಕ ಶರಣರು ಒಂದೆಡೆ ಸೇರಿ ಅನನ್ಯ ಶಕ್ತಿಯ, ಆತ್ಮದ, ಪರಮಾತ್ಮನ ಕುರಿತಾದ ಚಿಂತನೆಗಳನ್ನು ಸಮೂಹದಲ್ಲೇ, ಸರ್ವ ಶರಣರ ಸಮ್ಮುಖದಲ್ಲಿ ಮಾಡಿದರು. ತಾವೊಂದು ಬರೀಯ ಅಪ್ಪಟ ಚಿನ್ನವಲ್ಲ, ಚೆಲುವಾದ, ಹೊಳೆಯುವ ದೇವರಿಗೆ ಪ್ರಿಯವಾದ ತೊಡಿಗೆಯೆಂಬುದನ್ನು ಅಂದಿನ ಸಮಾಜಕ್ಕೆ ತೋರಿಸಿಕೊಟ್ಟರು. ಇಂದು ಸಹ ಈ ಉಕ್ತಿಗಳೆಲ್ಲ ಪ್ರಸ್ತುತವಾದಂತಹವು. ಶರಣ ಸಮುದಾಯದಲ್ಲಿ ಬಸವಣ್ಣನ ವ್ಯಕ್ತಿತ್ವ ಎಲ್ಲರ ಗಮನ ಸೆಳೆದಿತ್ತು. ಆತನ ವ್ಯಕ್ತಿತ್ವದ, ಅನುಭಾವದ, ಪ್ರಭಾವದ ಕುರಿತು ಪ್ರಭುದೇವ ಒಂದೆಡೆ ಹೀಗೆ ನುಡಿಯುತ್ತಾರೆ.

> ಆಯತ ಸ್ವಾಯತ ಸನ್ನಿಹಿತನಾಗಿ
> ಆರಾಧ್ಯಲಿಂಗದಲ್ಲಿ ಅನುಭಾವಿಯಾಗಿಪ್ಪನು ಬಸವಣ್ಣನು
> (ಅಲ್ಲಮಪ್ರಭುದೇವರ ವಚನಸಂಪುಟ ಸಂ: ಡಾ.ಬಿ.ವ್ಹಿ.ಮಲ್ಲಾಪುರ)

ಬಸವಣ್ಣ ಎಲ್ಲ ಬಗೆಯ ಸಿದ್ಧಿಯಿಂದ ಪೂಜೆಗೆ ಯೋಗ್ಯವಾದ ಲಿಂಗವಾದನೆಂಬ ಉಕ್ತಿ ಪ್ರಭುದೇವನದು. ಪ್ರಭುದೇವ ಎಲ್ಲ ಶರಣರನ್ನು ಒರೆದು ನೋಡುತ್ತಾನೆ. ಅವರವರ ಅನುಭಾವ ಪ್ರಪಂಚದ ಆಳ – ಅಗಲ, ವಿಸ್ತಾರಗಳನ್ನು ಮನಗಂಡಿದ್ದಾನೆ. ಹೀಗೆ ಶರಣರ ವ್ಯಕ್ತಿತ್ವದ, ಶಕ್ತಿಯ ಸಂಪೂರ್ಣ ಪರಿಚಯ ಪ್ರಭುದೇವನಿಗಿತ್ತು. ಪ್ರಭುದೇವರ ಪ್ರಭಾವದಲ್ಲಿ ಬಸವಣ್ಣನಿದ್ದರೆ, ಪ್ರಭುದೇವರು ಸಹ ಬಸವಣ್ಣನ ವ್ಯಕ್ತಿತ್ವಕ್ಕೆ ಮಾರು ಹೋಗಿದ್ದರು. ಹೀಗೆ ವ್ಯಕ್ತಿ ಮತ್ತು ಸಮುದಾಯಗಳು ಒಂದನ್ನೊಂದು ಪೂರಕವಾಗಿ, ಸಮಾನಾಂತರದಲ್ಲಿ ಬೆಳೆಯುತ್ತ ಸಾಗುತ್ತವೆ. ಈ ಪ್ರಕ್ರಿಯೆ ಶರಣರ ನಡೆಯಲ್ಲಿ, ಧರ್ಮದಲ್ಲಿ ಆಗಿರುವುದು ವಿಶೇಷ. ಏಕಕಾಲಕ್ಕೆ ಹಲವಾರು ಶರಣರು ಅನುಭಾವ ಪ್ರಪಂಚದ ಅನನ್ಯತೆಯನ್ನು, ಮೌಲ್ಯವನ್ನು ಇಡೀ ವಿಶ್ವಕ್ಕೆ ಮಾದರಿಯಾಗುವಂತೆ ಮಾಡಿದ್ದು ಮಹತ್ವದ ಸಂಗತಿ. ಇಂತಹ ಅನುಭಾವಿಯ 'ತನ್ನ ತಾನರಿದಡೆ ನುಡಿಯೆಲ್ಲಾ ತತ್ವ ನೋಡಾ' ಎಂದಿರುವುದು ಈ ಕಾರಣಕ್ಕಾಗಿಯೇ. ಪರತತ್ತ್ವದ ದರ್ಶನಕ್ಕೆ ಅಡ್ಡಿಯಾಗುವ ಭೂಮಿ, ಹೇಮ, ಕಾಮಿನಿಯನ್ನೆಲ್ಲಾ ಸರಿಸಿ ಜ್ಞಾನರತ್ನವನ್ನು ಅಲಂಕರಿಸಿಕೊಂಡು, ಆ ಬೆಳಕಿನಲ್ಲಿ ಚಿದ್ಬೆಳಕನ್ನು ಕೂಡುವ ಪರಿ ಪ್ರಭುದೇವ ಮಾರ್ಮಿಕವಾಗಿ ವ್ಯಾಖ್ಯಾನಿಸಿದ್ದಾರೆ.

ಶರಣ ಸಮುದಾಯದ ಬಸವಣ್ಣನಾದಿಯಾಗಿ ಎಲ್ಲರೂ ಅನುಭವದ, ಅನುಭಾವದ, ಅನುಭೂತಿಯ ಕುರಿತು ಮಾತನಾಡುತ್ತಾರೆ. ಭವದ ಕೇಡಾಗದ ಹೊರತು ಅನುಭಾವ ಪ್ರಪಂಚಕ್ಕೆ ಯಾವುದೇ ನೆಲೆ ಬೆಲೆಗಳಿಲ್ಲ. ಅನುಭಾವ ಪ್ರಪಂಚದ ವಿಸ್ತರಿಸುವಿಕೆಯಿಂದಲೇ ಶರಣ ಧರ್ಮ ಗಟ್ಟಿಯಾಗಿರುವುದು. ಇಂತಹ ಗಟ್ಟಿಯಾದ ತಳಪಾಯದ ಮೇಲೆ ನಿಂತ ಶರಣ ಧರ್ಮಸೌಧ ಇಂದು, ಎಂದೆಂದಿಗೂ ಕಂಗೊಳಿಸುತ್ತದೆ.